ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

ಸಂಖ್ಯೆ:ಬಿಸಿಯು/ಎಸ್‌ವೈಎನ್–16/ಸಾಮಾನ್ಯಸಭೆ/[illegible]/2021–22 ದಿನಾಂಕ: 15.03.2022.

ಗೆ,
ಮಾನ್ಯ ಸಿಂಡಿಕೇಟ್ ಸದಸ್ಯರು,
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಬೆಂಗಳೂರು–560 001

ಮಾನ್ಯರೆ,

ವಿಷಯ: ದಿನಾಂಕ 08.03.2022 ರಂದು ಜರುಗಿದ 16ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು

****

ದಿನಾಂಕ 08.03.2022 ರಂದು ಪೂರ್ವಾಹ್ನ 11.00 ಗಂಟೆಗೆ ಜರುಗಿದ 16ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ಮಾನ್ಯ ಕುಲಪತಿಗಲು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಾಮಾವಳಿ 5.16 ರನ್ವಯ ಕಳುಹಿಸುತ್ತಿದ್ದೇನೆ.

ನಡವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸಿದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾವಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು–560001
2. ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು – 560001
3. ಕುಲಪತಿಗಳು, ಕುಲಸಚಿವರು, ಕುಲಸಚಿವರು(ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಿಗೆ. ಬಿಸಿಯು
4. ಕಛೇರಿ ಪ್ರತಿ/ರಕ್ಷಾ ಕಡತ

ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

**BENGALURU
CITY UNIVERSITY**

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

ಸಂಖ್ಯೆ:ಬಿಸಿಯು/ಎಸ್‌ವೈಎನ್–16/ಸಾಮಾನ್ಯಸಭೆ/೩೬/2021–22 ದಿನಾಂಕ: 14.03.2022.

ದಿನಾಂಕ 08.03.2022 ರಂದು ಪೂರ್ವಾಹ್ನ 11.00 ಗಂಟೆಗೆ ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು 560 001 ಇಲ್ಲಿ ಜರುಗಿದ ಸಿಂಡಿಕೇಟ್ 16ನೇ ಸಾಮಾನ್ಯ ಸಭೆಯ ನಡವಳಿಗಳು.

**ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ. ಲಿಂಗರಾಜ ಗಾಂಧಿ ಪಿ.ಹೆಚ್.ಡಿ<br>ಕುಲಪತಿಗಳು, | ಸಭಾಧ್ಯಕ್ಷರು |
| 2. | ಡಾ. ವಿ. ಆರ್. ದೇವರಾಜ್ | ಸದಸ್ಯರು |
| 3. | ಶ್ರೀ ಎಂ. ವಿ. ರಂಗಪ್ಪ | ಸದಸ್ಯರು |
| 4. | ಶ್ರೀ ಸಮರ್ಥ ಮುನಿರಾಜು | ಸದಸ್ಯರು |
| 5. | ಡಾ. ಶಿಂಟಿ ಆಂಟನಿ | ಸದಸ್ಯರು |
| 6. | ಶ್ರಿ. ಕೆ ಶಿವಣ್ಣ | ಸದಸ್ಯರು |
| 7. | ಡಾ. ಗುರುನಾಥರಾವ್ ವೈದ್ಯ | ಸದಸ್ಯರು |
| 8. | ಡಾ. ಅನೇಸಿಯಾ | ಸದಸ್ಯರು |
| 9. | ಶ್ರೀ ಹೆಚ್.ಎನ್. ಹರಿಪ್ರಸಾದ | ಸದಸ್ಯರು |
| 10. | ಶ್ರೀ ಟಿ. ಹೆಚ್. ಶ್ರೀನಿವಾಸಯ್ಯ | ಸದಸ್ಯರು |
| 11. | ಡಾ. ಆರ್ ಕೆ ಚಂದ್ರನಾಥ್ | ಸದಸ್ಯರು |
| 12. | ಪ್ರೊ. ಬಿ. ರಮೇಶ್,<br>ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 13. | ಶ್ರೀ ಸಿ ಎನ್ ಶ್ರೀಧರ, ಕೆ.ಎಎಸ್<br>ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |

ಕುಲಸಚಿವರು ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲ ಸದಸ್ಯರನ್ನು ಸ್ವಾಗತಿಸಿ, ಸಭೆಗೆ ಚಾಲನೆ ನೀಡಲು ಸಭಾಧ್ಯಕ್ಷರ ಅನುಮೋದನೆಯನ್ನು ಕೋರಿದರು. ಅದರಂತೆ, ಕುಲಪತಿಗಳು ಎಲ್ಲ ಸದಸ್ಯರನ್ನು ಸ್ವಾಗತಿಸಿ, ಕಾರ್ಯಸೂಚಿಯನ್ನು ಮಂಡಿಸಲು ಸೂಚಿಸಿದರು.

**ವಿಷಯ ಸಂಖ್ಯೆ 1: ದಿನಾಂಕ 17.12.2021 ರಂದು ಜರುಗಿದ 15 ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿ, ದಿನಾಂಕ 30.12.2021 ಹಾಗೂ 09.02.2022 ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಗಳ ನಡವಳಿಗಳನ್ನು ಧೃಢೀಕರಣ ಮತ್ತು ಅನುಪಾಲನಾ ವರದಿ.**

***ವಿವರಣೆ:***

ದಿನಾಂಕ 17.12.2021 ರ ನಡವಳಿಯ, ವಿಷಯ ಸಂಖ್ಯೆ: 11 ಕುರಿತಂತೆ, 2022–23 ನೇ ಸಾಲಿನ ಸಂಯೋಜನಾ ಅರ್ಜಿಗಳನ್ನು ಸಲ್ಲಿಸಲು ಆನ್‌ಲೈನ್ ಪೋರ್ಟಲ್ ಪ್ರಾರಂಭಿಸಲು ಸರ್ಕಾರಕ್ಕೆ ಇನ್ನೊಂದು ನೆನಪೋಲೆ ಬರೆಯಲು ಮತ್ತು ವಿಷಯ ಸಂಖ್ಯೆ: 18 ಕುರಿತಂತೆ, The Public Premises (Eviction of unauthorized occupants) Act-1958 ಪ್ರಕಾರ ಕ್ರಮ ವಹಿಸಲು ಸಭೆ ಸೂಚನೆ ನೀಡಿತು.

ಸಿಂಡಿಕೇಟ್ ತೀರ್ಮಾನ:

**ದಿನಾಂಕ 17.12.2021 ರಂದು ಜರುಗಿದ ಸಿಂಡಿಕೇಟ್ 15ನೇ ಸಾಮಾನ್ಯ ಸಭೆ ಹಾಗೂ ದಿನಾಂಕ 30.12.2021 ಮತ್ತು 09.02.2022 ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಗಳ ನಡವಳಿಗಳನ್ನು ಧೃಡಿಕರಿಸಿ ಮೇಲಿನ ಸೂಚನೆಗಳಿಗೆ ಒಳಪಟ್ಟು ಅನುಪಾಲನಾ ವರದಿಗಳಿಗೆ ಅನುಮೋದನೆ ನೀಡಲಾಯಿತು.**

**ವಿಷಯ ಸಂಖ್ಯೆ: 02 : ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸಿಂಡಿಕೇಟ್, ವಿದ್ಯಾವಿಷಯಕ ಪರಿಷತ್ತು ಹಾಗೂ ಇತರ ಸಮಿತಿಗಳ ಸದಸ್ಯರಿಗೆ ಸಭಾ ಭತ್ಯೆ ಮತ್ತು ವಾಹನ ಭತ್ಯೆ ಪರಿಷ್ಕರಿಸುವ ಕುರಿತು.**

**ಉಲ್ಲೇಖ: 1. ದಿನಾಂಕ 19.01.2019 ರಂದು ಜರುಗಿದ ಸಿಂಡಿಕೇಟ್ ಸಭೆಯ ನಿರ್ಣಯ.**

**2. ವಿಶ್ವವಿದ್ಯಾನಿಲಯದ ಆದೇಶ ಸಂ:BCU/SYN/1/563/2018-19 /01.02.2019.**

***

*ಪರಾಮರ್ಶಕ ಟಿಪ್ಪಣಿ:*

ದಿನಾಂಕ 19.01.2019 ರ ಸಿಂಡಿಕೇಟ್ ನಿರ್ಣಯದ ಪ್ರಕಾರ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸಿಂಡಿಕೇಟ್, ವಿದ್ಯಾವಿಷಯಕ ಪರಿಷತ್ ಹಾಗೂ ಇತರ ಸಮಿತಿಗಳ ಸಭೆಗಳಿಗೆ ಹಾಜರಾಗುವ ಸದಸ್ಯರಿಗೆ ಕೆಳಗೆ ನಮೂದಿಸಿರುವ ಸಭಾ ಭತ್ಯೆ ಮತ್ತು ವಾಹನ ಭತ್ಯೆಗಳನ್ನು ನಿಗದಿಪಡಿಸಲಾಗಿದೆ.

| Sl. No | Authorities/ Committees | Sitting fee | Conveyance Allowance |
|---|---|---|---|
| 1. | Syndicate | ₹4,000/- | ₹ 500/- |
| 2. | Academic Council /FinanceCommittee/ Works Committee /Central purchase Committee /Syndicate Sub-Committees / High Level Expert Advisory Committees | ₹3,000/- | ₹500/- |
| 3. | Other Expert Committees constituted for specific purpose | ₹2,000/- | ₹500/- |
| 4. | External Members attending Board of Studies & Faculty meeting | ₹2,000/- + DA ₹ 1,000/- | 2nd Class AC on production of Ticket or III tier AC or Airfare with prior approval of Vice-Chancellor |
| 5. | Internal Members of affiliated Colleges attending Board of Studies & Faculty meeting | - | ₹500/- |

ಮೇಲಿನ ಸಭಾ ಭತ್ಯೆ ಹಾಗೂ ವಾಹನ ಭತ್ಯೆಗಳ ದರಗಳನ್ನು ಪರಿಷ್ಕರಿಸುವ ವಿಷಯವನ್ನು ಸಿಂಡಿಕೇಟ್ ಸಭೆಯ ಪರಾಮರ್ಶೆಗೆ ಮಂಡಿಸಲಾಗಿದೆ.

ಸಿಂಡಿಕೇಟ್ ತೀರ್ಮಾನ:

**ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸಿಂಡಿಕೇಟ್, ವಿದ್ಯಾವಿಷಯಕ ಪರಿಷತ್ ಹಾಗೂ ಇತರ ಸಮಿತಿಗಳ ಸಭೆಗಳಿಗೆ ಹಾಜರಾಗುವ ಸದಸ್ಯರಿಗೆ ಕೆಳಗೆ ನಮೂದಿಸಿದಂತೆ ಸಭಾ ಭತ್ಯೆ ಹಾಗೂ ವಾಹನ ಭತ್ಯೆಗಳನ್ನು ಮಂಜೂರು ಮಾಡಲು ತೀರ್ಮಾನಿಸಲಾಯಿತು.**

| Sl. No | Authorities/ Committees | Sitting fee | Conveyance Allowance |
|---|---|---|---|
| 1. | Syndicate | **₹6,000/-** | **₹ 1,000/-** |
| 2. | Academic Council /FinanceCommittee/ Works Committee /Central purchase Committee /Syndicate Sub-Committees /High Level Expert Advisory Committees | **₹4,000/-** | **₹1,000/-** |
| 3. | Other Expert Committees constituted for specific purpose | **₹3,000/-** | **₹1,000/-** |
| 4. | External Members attending Board of Studies & Faculty meeting | **₹3,000/- + DA ₹ 1,000/-** | **2nd Class AC on production of Ticket or III tier AC or Airfare with prior approval of Vice-Chancellor**<br>**Rs. 8/per km for travel by car** |
| 5. | Internal Members of affiliated Colleges attending Board of Studies & Faculty meeting | - | **₹1000/-** |

ವಿಷಯ ಸಂಖ್ಯೆ: 03 : ಎಸ್.ವಿ.ಎನ್.ಕೆ ಹೊಸ ಕಾಲೇಜಿಗೆ ಸಂಯೋಜನೆ ನೀಡುವ ಬಗ್ಗೆ.

ಉಲ್ಲೆಖ: 1. ಸರ್ಕಾರದ ಆದೇಶ ಸಂಖ್ಯೆ: ಇಡಿ 42 ಯುಆರ್‌ಸಿ 2022, ದಿನಾಂಕ: 25.01.2022

2.ಅಧಿಸೂಚನೆ ಸಂಖ್ಯೆ: ಬೆಂ.ನ.ವಿ/ಶೈ.ವಿ/ಮ.ಬೇಟಿ/ಸಂಯೋಜನೆ/2021–22 ದಿ.04.02.2021

***

*ಪರಾಮರ್ಶಕ ಟಿಪ್ಪಣಿ*

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಶ್ರಿ ವಿದ್ಯಾ ಸೆಂಥಿಲ್ ಪೌಂಡೇಷನ್, ನಟ್‌ಕಲ್ಲಪ್ಪ ಸರ್ಕಲ್ ಹತ್ತಿರ, ಡಿ.ವಿ.ಜಿ ರಸ್ತೆ, ಬಸವನಗುಡಿ, ಬೆಂಗಳೂರು – 560 004 ಇವರ ಮನವಿಯನ್ನು ಸರ್ಕಾರವು ಪರಿಶೀಲಿಸಿ, ಸದರಿ ಕಾಲೇಜಿಗೆ ಮರು ಪರಿಶೀಲನೆ ಮಾಡಲು ಸ್ಥಳೀಯ ವಿಚಾರಣಾ ಸಮಿತಿಯನ್ನು ಕಳುಹಿಸಿ, ನಿಯಮಾನುಸಾರ ತನಿಖೆ ಕೈಗೊಂಡು ಸೂಕ್ತ ಪ್ರಾಧಿಕಾರದ ಅನುಮೋದನೆಯೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸರ್ಕಾರದ ಅಧೀನ ಕಾರ್ಯದರ್ಶಿ ಉನ್ನತ ಶಿಕ್ಷಣ ಇಲಾಖೆರವರು ಉಲ್ಲೇಖ(1) ರ ಪತ್ರದಲ್ಲಿ ಕೋರಿರುತ್ತಾರೆ.

ಸರ್ಕಾರ ಆದೇಶದನ್ವಯ ಡಾ. ಆರ್ ಕೆ ಚಂದ್ರನಾಥ್ ರವರ ಅಧ್ಯಕ್ಷತೆಯಲ್ಲಿ ಸ್ಥಳೀಯ ವಿಚಾರಣಾ ಸಮಿತಿ ರಚಿಸಿದ್ದು, ಉಲ್ಲೇಖ (2)ರ ವಿಶ್ವವಿದ್ಯಾನಿಲಯದ ಆದೇಶದಂತೆ ಸಮಿತಿಯು ಮರು ಪರಿಶೀಲನೆಗಾಗಿ ದಿನಾಂಕ 10.02.2022 ರಂದು ಕಾಲೇಜಿಗೆ ಭೇಟಿ ನೀಡಿ ವರದಿಯನ್ನು ಸಲ್ಲಿಸಿರುತ್ತಾರೆ.

ಸ್ಥಳೀಯ ವಿಚಾರಣಾ ಸಮಿತಿಯ ವರದಿಯಲ್ಲಿ ಕೆಳಕಂಡಂತೆ ಸೂಚಿಸಲಾಗಿದೆ.

**PART : B WEIGHTED SCORE**

| Sl. No | Criteria / Index | Criteria-wise percentage | Secured Score as per LIC Data | Secured Weighted Score |
|---|---|---|---|---|
| 1 | Infrastructure Index | 70 | 89 | 47.92 |
| 2 | Faculty Index | 30 | 18 | 9.00 |
| | Total | 100 | 107 | 56.92 |

**PART : C RECOMMENDATIONS**

| Score – Combinations | | | | |
|---|---|---|---|---|
| **Sl No** | **Name of the Course and Combination** | **NCTE/AICTE Approval** | **Intake Sought** | **Recommendations** |
| 1 | Bachelor of Business Administrations- BBA | Not Applicable | 60 | Recommended to 40 Intake |
| 2 | Bachelor of Commerce – B.Com | Not Applicable | 100 | Recommended to 80 Intake |

ಎಸ್.ವಿ.ಎಸ್.ಕೆ ಹೊಸ ಕಾಲೇಜಿಗೆ ಸಂಯೋಜನೆ ನೀಡುವುದರ ಬಗ್ಗೆ ಮೇಲ್ಕಂಡ ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ಸಿಂಡಿಕೇಟ್ ತೀರ್ಮಾನ:

**ಬಿ.ಬಿ.ಎ ವ್ಯಾಸಂಗಕ್ಕೆ 40 ವಿದ್ಯಾರ್ಥಿಗಳ ಹಾಗೂ ಬಿ.ಕಾಂ ವ್ಯಾಸಂಗಕ್ಕೆ 80 ವಿದ್ಯಾರ್ಥಿಗಳ ಪ್ರವೇಶ ಸಂಖ್ಯೆಯೊಂದಿಗೆ ಎಸ್.ವಿ.ಎಸ್.ಕೆ ಹೊಸ ಮಹಾವಿದ್ಯಾಲಯಕ್ಕೆ ಸಂಯೋಜನೆ ನೀಡಲು ಸ್ಥಳೀಯ ವಿಚಾರಣಾ ಸಮಿತಿಯ ಶಿಫಾರಸ್ಸುಗಳಿಗೆ ಒಪ್ಪಿಗೆ ನೀಡಲಾಯಿತು.**

**ವಿಷಯ ಸಂಖ್ಯೆ: 4 : ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2020–21ನೇ ಸಾಲಿನ ವಾರ್ಷಿಕ ಲೆಕ್ಕತಖ್ತೆಗಳನ್ನು ಅನುಮೋದಿಸುವ ಬಗ್ಗೆ.**

***ಪರಾಮರ್ಶಕ ಟಿಪ್ಪಣಿ.***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2020–21 ರ ಆರ್ಥಿಕ ವರ್ಷದ ಲೆಕ್ಕತಖ್ತೆಗಳನ್ನು ತಯಾರಿಸಿದ್ದು ಸದರಿ ಲೆಕ್ಕತಃಖ್ತೆಗಳ ಕರಡು ಪ್ರತಿಯನ್ನು ದಿನಾಂಕ 28.02.2022 ರಂದು ಜರುಗಿದ ಹಣಕಾಸು ಸಮಿತಿ ಸಭೆಯ ಪರಿಶೀಲನೆಗೆ ಮಂಡಿಸಲಾಗಿದ್ದು, ಹಣಕಾಸು ಸಮಿತಿ ವಾರ್ಷಿಕ ಲೆಕ್ಕತಖ್ತೆಗಳನ್ನು ಪರಿಶೀಲಿಸಿ ಅನುಮೋದನೆ ನೀಡಿರುತ್ತದೆ. 2021–22 ನೇ ಸಾಲಿನ ವಾರ್ಷಿಕ ಲೆಕ್ಕತಖ್ತೆಗಳನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಅನುಚ್ಛೇದ 47 ಪ್ರಕಾರ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

ಮಾನ್ಯ ಕುಲಪತಿಗಳು ವಿವರಣೆ ನೀಡಿ, ವಾರ್ಷಿಕ ಲೆಕ್ಕಪತ್ರದ ವಿವರಗಳನ್ನು ಬೇರೆ ವಿಶ್ವವಿದ್ಯಾನಿಲಯಗಳು ಅನುಸರಿಸುವ ಪದ್ಧತಿಗಳನ್ನು ಗಮನಿಸಿ ಜಾಗರೂಕತೆಯಿಂದ ಸಿದ್ದಪಡಿಸಲಾಗಿದೆ. ಹಣಕಾಸು ಸಮಿತಿ ಸಹ ವಾರ್ಷಿಕ ಲೆಕ್ಕಪತ್ರಗಳಿಗೆ ಅನುಮೋದನೆ ನೀಡಿ ಮೆಚ್ಚುಗೆ ವ್ಯಕ್ತಪಡಿಸಿದೆ ಎಂದು ತಿಳಿಸಿದರು.

ವಿತ್ತಾಧಿಕಾರಿಗಳು ಸಭೆಗೆ ಆಗಮಿನಿಸಿ 2020–21 ನೇ ಸಾಲಿನ ವಾರ್ಷಿಕ ಲೆಕ್ಕತಖ್ತೆಯ ವಿವರಗಳನ್ನು ಸಭೆಗೆ ಒದಗಿಸಿದರು.

ಸದಸ್ಯರಾದ ಡಾ. ಆರ್. ಕೆ. ಚಂದ್ರನಾಥ್ ರವರು ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪತ್ರಗಳ ವರದಿಯನ್ನು ಕ್ರಮಬದ್ಧವಾಗಿ ಸಿದ್ದಪಡಿಸಿರುವುದನ್ನು ಹಣಕಾಸು ಸಮಿತಿಯು ಸದಸ್ಯರು ಪ್ರಶಂಸಿದ್ದಾರೆ ಎಂದು ತಿಳಿಸಿದರು. ಸದಸ್ಯರಾದ ಶ್ರೀ ಟ.ಹೆಚ್. ಶ್ರೀನಿವಾಸಯ್ಯ ಮತ್ತು ಶ್ರೀ ಹೆಚ್. ಎನ್. ಹರಿಪ್ರಸಾದ ರವರು ಸಹ ವಾರ್ಷಿಕ ಲೆಕ್ಕಪತ್ರಗಳ ವರದಿಯನ್ನು ಅಚ್ಚುಕಟ್ಟಾಗಿ ಸಿದ್ಧಪಡಿಸಿರುವುದಕ್ಕೆ ಪ್ರಶಂಸೆ ವ್ಯಕ್ತಪಡಿಸಿದರು. ಇದಕ್ಕೆ ಕಾರಣರಾದ ಎಲ್ಲ ಅಧಿಕಾರಿ/ಸಿಬ್ಬಂದಿಗಳನ್ನು ಅಭಿನಂದಿಸಿದರು.

ಸಿಂಡಿಕೇಟ್ ತೀರ್ಮಾನ:

**ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2020–21ನೇ ಸಾಲಿನ ವಾರ್ಷಿಕ ಲೆಕ್ಕತಖ್ತೆಗಳನ್ನು ಪರಿಶೀಲಿಸಿ ಅನುಮೋದನೆ ನೀಡಲು ತೀರ್ಮಾನಿಸಲಾಯಿತು.**

ವಿಷಯ ಸಂಖ್ಯೆ: 5: ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2022-23ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಅನುಮೋದಿಸುವ ಬಗ್ಗೆ.

*ಪರಾಮರ್ಶಕ ಟಿಪ್ಪಣಿ:*

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2022-23ನೇ ಆರ್ಥಿಕ ಸಾಲಿನ ಆಯವ್ಯಯ ಅಂದಾಜು ಪತ್ರವನ್ನು ಸಿದ್ಧಪಡಿಸಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಅನುಚ್ಛೇದ 48 ಪ್ರಕಾರ ಸದರಿ ಆಯವ್ಯಯ ಅಂದಾಜಿನ ಕರಡು ಪ್ರತಿಯನ್ನು ದಿನಾಂಕ 28.02.2022 ರಂದು ಜರುಗಿದ ಹಣಕಾಸು ಸಮಿತಿ ಸಭೆಯ ಪರಿಶೀಲನೆಗೆ ಮಂಡಿಸಲಾಗಿ ಸದರಿ ಸಭೆ. 2022-23 ನೇ ಸಾಲಿನ ಆಯವ್ಯಯಗಳನ್ನು ಪರಿಶೀಲಿಸಿ ಅನುಮೋದನೆ ನೀಡಿರುತ್ತದೆ.

**2022-23ನೇ ಸಾಲಿನ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಆಯವ್ಯಯ ಅಂದಾಜು ಪತ್ರದ ಸಾರಾಂಶ**

| | |
|---|---|
| 1. ಅಂದಾಜು ಒಟ್ಟು ಸ್ವೀಕೃತಿಗಳು | ರೂ. 17,098.02 ಲಕ್ಷಗಳು |
| 2. ಅಂದಾಜು ಒಟ್ಟು ಖರ್ಚು-ವೆಚ್ಚಗಳು | ರೂ. 18,293.06 ಲಕ್ಷಗಳು |
| ಆಯವ್ಯಯದಲ್ಲಿ ಒಟ್ಟು ಕೊರತೆ ಮೊತ್ತ (Total Deficit in the Budget) | ರೂ. 1,195.04 ಲಕ್ಷಗಳು |

ಹಣಕಾಸು ಸಮಿತಿ ಶಿಫಾರಸ್ಸು ಮಾಡಿರುವ ವಿಶ್ವವಿದ್ಯಾನಿಲಯದ 2022-23 ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ರ ಅನುಚ್ಛೇದ 48 ರ ಪ್ರಕಾರ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

*ವಿವರಣೆ:*

2022-23ನೇ ಸಾಲಿನ ಆಯವ್ಯಯ ಅಂದಾಜು ಪತ್ರವನ್ನು ಸಭೆಯಲ್ಲಿ ಮಂಡಿಸಲಾಯಿತು. ವಿತ್ತಾಧಿಕಾರಿಗಳು ಸಭೆಗೆ ಆಗಮಿಸಿ ಆಯವ್ಯಯ ಅಂದಾಜು ಪತ್ರದ ವಿವರಗಳನ್ನು ಒದಗಿಸಿದರು.

ಮಾನ್ಯ ಕುಲಪತಿಗಳು ಆಯವ್ಯಯ ಕುರಿತು ವಿವರಣೆ ನೀಡುತ್ತಾ, ಆಯವ್ಯಯ ಸಿದ್ದಪಡಿಸುವಲ್ಲಿ ಸಾಕಷ್ಟು ಮುತುವರ್ಜಿ ವಹಿಸಲಾಗಿದೆ. ಬೇರೆ ವಿಶ್ವವಿದ್ಯಾಲಯಗಳ ಮಾದರಿ ಹಾಗೂ ಆಯವ್ಯಯ ಸಿದ್ದಪಡಿಸುವಲ್ಲಿ ಸರ್ಕಾರದ ಮಾನದಂಡಗಳನ್ನು ಪರಾಮರ್ಶಿಸಲಾಗಿದೆ. ಶೈಕ್ಷಣಿಕ ಅಭಿವೃದ್ಧಿಗೆ ಪೂರಕವಾದ ಬಜೆಟ್ ಇದಾಗಿದ್ದು, NEP-2020 ರ ಆಶಯದಂತೆ ಮುಂದಿನ ವರ್ಷದಿಂದ ಇಂಟಿಗ್ರೇಟಡ್ UG & PG ಕೋರ್ಸುಗಳನ್ನು ಜಾರಿಯಲ್ಲಿ ತರ ಬೇಕಾಗಿರುವುದರಿಂದ ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ವಿಭಾಗಗಳಲ್ಲಿ ಸ್ನಾತಕ ವ್ಯಾಸಂಗ ಪ್ರಾರಂಭಿಸಲು ಅಗತ್ಯ ಹಣಕಾಸಿನ ಅವಕಾಶ ಕಲ್ಪಿಸಲಾಗಿದೆ ಎಂದು ತಿಳಿಸಿದರು. ಗ್ರಂಥಾಲಯ ಸುಧಾರಣೆ ಮತ್ತು ಡಿಜಿಟಲೀಕರಣ, ಪ್ರಯೋಗಾಲಯ ಅಭಿವೃದ್ಧಿ ಹಾಗೂ ನವೀಕರಣ, ಸರ್ಕಾರ ಜಾರಿಗೆ ತಂದಿರುವ E-Office, ಕುರಿತು ಸಿದ್ಧತೆ

ಮಾಡುವುದು, ಆಡಳಿತ, ಹಣಕಾಸು ಮತ್ತು ಶೈಕ್ಷಣಿಕ ಚಟುವಟಿಕೆಗಳನ್ನು ಕಂಪ್ಯೂಟರೀಕರಣಗೊಳಿಸುವುದು ಮುಂತಾದ ಕಾರ್ಯಕ್ರಮಗಳಿಗೆ ಮೂಲಭೂತ ಸೌಲಭ್ಯ ಒದಗಿಸುವುದಕ್ಕಾಗಿ ಬಜೆಟ್‌ನಲ್ಲಿ ಅವಕಾಶ ಕಲ್ಪಿಸಲಾಗಿದೆ. ಎಂದು ತಿಳಿಸಿದರು.

ವಿಶ್ವವಿದ್ಯಾನಿಲಯಕ್ಕೆ UGC 12(B) ಮಾನ್ಯತೆ ದೊರೆತರೆ ಕೇಂದ್ರ ಸರ್ಕಾರ / ಯುಜಿಸಿ ಯಿಂದ ಹೆಚ್ಚುವರಿ ಹಣಕಾಸು ಸಹಾಯ ಪಡೆಯುವ ಸಾಧ್ಯತೆ ಇದೆ. ಇದಕ್ಕಾಗಿ ಹಿಂದಿನ ಕುಲಪತಿಗಳು 2 ಸಲ ಪ್ರಯತ್ನ ಮಾಡಿದ್ದು ಸಾಕಷ್ಟು ಸಂಖ್ಯೆಯ ಶಿಕ್ಷಕರ ನೇಮಕಾತಿ ಆಗದೆ ಇರುವುದರಿಂದ ಯಶಸ್ವಿಯಾಗಿಲ್ಲ. ಈ ವಿಶ್ವವಿದ್ಯಾನಿಲಯವು ಹೊಸದಾಗಿ ಸೃಷ್ಠಿಯಾದ ವಿಶ್ವವಿದ್ಯಾನಿಯವಾಗಿರದೆ, ಬೆಂಗಳೂರು ವಿಶ್ವವಿದ್ಯಾನಿಲಯದಿಂದ ವಿಭಜನೆಗೊಂಡ ವಿಶ್ವವಿದ್ಯಾನಿಲಯವಾಗಿದ್ದು. ಈ ಹಿಂದೆ ಇಲ್ಲಿರುವ ವಿಭಾಗಗಳು UGC ಯಿಂದ ಮಾನ್ಯತೆ ಪಡೆದ ವಿಭಾಗಗಳಾಗಿರುತ್ತವೆ. ಕಾರಣ 12(B) ಮಾನ್ಯತೆ ಮುಂದುವರೆಸಲು UGC ಯವರಿಗೆ ಪುನಃ ಕೋರಿಕೆ ಸಲ್ಲಿಸಲಾಗಿದೆ ಎಂದು ಹೇಳಿದರು.

ಸಂಶೋಧನೆಗೆ ಉತ್ತೇಜನ ನೀಡಲು ಹಾಗೂ ಸಂಪನ್ಮೂಲ ಕ್ರೋಢಿಕರಣದ ಉದ್ದೇಶದಿಂದ ಹೊಸ ಸಂಶೋಧನಾ ಕೇಂದ್ರ, ವಿಶಿಷ್ಠ / ವಿಶೇಷ ಅಧ್ಯಯನ ಕೇಂದ್ರಗಳಿಗೆ ಮಾನ್ಯತೆ ನೀಡುವ ಉದ್ದೇಶದಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಔದ್ಯೋಗಿಕ ಸಂಸ್ಥೆಗಳೊಂದಿಗೆ ಸಹಭಾಗಿತ್ವದ ಸಂಶೋಧನೆಗಾಗಿ ಆಯವ್ಯಯದಲ್ಲಿ ಅವಕಾಶ ಮಾಡಲಾಗಿದೆ ಎಂದು ತಿಳಿಸಿದರು.

ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿಗೆ ಆಯವ್ಯಯದಲ್ಲಿ ಒತ್ತು ನೀಡಬೇಕೆಂದು ಮಾನ್ಯ ಸದಸ್ಯರಾದ ಶ್ರೀ. ಹೆಚ್. ಎನ್ ಹರಿಪ್ರಸಾದ್ ರವರು ಅಭಿಪ್ರಾಯ ವ್ಯಕ್ತಪಡಿಸಿದರು. ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದ ಆಸ್ತಿ ಅವರ ಯೋಗಕ್ಷೇಮಕ್ಕಾಗಿ ಆರೋಗ್ಯಕೇಂದ್ರ, ಆರೋಗ್ಯವಿಮೆ, ವಿದ್ಯಾರ್ಥಿಗಳ ಮಾನಸಿಕ ಆರೋಗ್ಯ ಕುರಿತಂತೆ ಆಪ್ತ ಸಮಾಲೋಚನೆ, ಉಪಹಾರಗೃಹ ಇತ್ಯಾದಿಗಳಿಗಾಗಿ ಆಯವ್ಯಯದಲ್ಲಿ ಅವಕಾಶ ಕಲ್ಪಿಸಬೇಕು, ಇದಲ್ಲದೆ ಪರೀಕ್ಷಾ ವಿಭಾಗದ ಕಟ್ಟಡ ನವೀಕರಣಗೊಳಿಸಬೇಕು ಹಾಗೂ ಅದಕ್ಕೆ ಹೊಂದಿಕೊಂಡಿರುವ ಸ್ಥಳವನ್ನು ವಿಶ್ವವಿದ್ಯಾನಿಲಯದ ನಿಯಂತ್ರಣಕ್ಕೆ ಪಡೆಯಬೇಕು ಎಂದು ಸಲಹೆ ನೀಡಿದರು.

ಸದಸ್ಯರಾದ ಶ್ರೀ ಹೆಚ್. ಎನ್. ಹರಿಪ್ರಸಾದ ಮತ್ತು ಶ್ರೀ ಟಿ. ಹೆಚ್. ಶ್ರೀನಿವಾಸಯ್ಯನವರು ವಿಶ್ವವಿದ್ಯಾನಿಲಯಕ್ಕೆ ಒಂದು ಉಪಹಾರ ಗೃಹದ ಅಗತ್ಯವಿದ್ದು, ಆಧುನಿಕ ಶೈಲಿಯ ಹೊಸ ಕ್ಯಾಂಟಿನ್ ಕಟ್ಟಡಕ್ಕೆ ಅಗತ್ಯವಾದ ಅವಕಾಶವನ್ನು ಕಲ್ಪಿಸಬೇಕೆಂದು ಅಭಿಪ್ರಾಯ ಪಟ್ಟರು. ಪ್ರಸ್ತುತ ಒಂದು ಕಟ್ಟಡದಲ್ಲಿ ತಾತ್ಕಾಲಿಕವಾಗಿ ಕೂಡಲೇ ಕ್ಯಾಂಟೀನ ಪ್ರಾರಂಭಿಸಲು ಕ್ರಮ ವಹಿಸಿದಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲವಾಗವುದು ಎಂದು ತಿಳಿಸಿದರು.

ಕುಲಸಚಿವರು ಈಗಾಗಲೇ ತಾತ್ಕಾಲಿಕವಾಗಿ ಉಪಹಾರ ಗೃಹ ಪ್ರಾರಂಭಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದು ತಿಳಿಸಿದರು.

ಮಾನ್ಯ ಸದಸ್ಯರಾದ ಡಾ. ವಿ. ಆರ್. ದೇವರಾಜ್ ರವರು ಇತ್ತೀಚಿನ ದಿನಗಳಲ್ಲಿ ಸಂಶೋಧನೆಗಾಗಿ ಸರ್ಕಾರದಿಂದ ಅನುದಾನ ನೀಡುವುದು ಕಡಿಮೆಯಾಗಿರುವುದರಿಂದ ವಿಶ್ವವಿದ್ಯಾನಿಲಯಗಳಲ್ಲಿ ಸಂಪನ್ಮೂಲದಿಂದ ಸಂಶೋಧನೆಗಳಲ್ಲಿ ತೊಡಗಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ರೂಪದಲ್ಲಿ ಹಣಕಾಸು ಸಹಾಯ ನೀಡಲು ಅವಕಾಶ ಕಲ್ಪಿಸಬೇಕೆಂದು ತಿಳಿಸಿದರು.

ಸದಸ್ಯರಾದ ಡಾ. ಗುರುನಾಥರಾವ್ ವೈದ್ಯ ರವರು, ಘಟಕ ಕಾಲೇಜಿನ 2021–22 ಶುಲ್ಕ ಸ್ವೀಕೃತಿ ಹಾಗೂ 2022–23 ರ ಅಂದಾಜಿನಲ್ಲಿ ಬಹಳಷ್ಟು ವ್ಯಾತ್ಯಾಸವಿರುವುದನ್ನು ಹಾಗೂ ಸಂಶೋದನೆಗಾಗಿ, ಉದ್ಯೋಗಿಕ ಸಂಸ್ಥೆಗಳೊಂದಿಗೆ ಸಹಭಾಗಿತ್ವ ಕುರಿತು ಪ್ರಸ್ತಾಪಿಸಿದರು.

ಸೌರ ವಿದ್ಯುತ್ ಸ್ಥಾಪರ ಪ್ರಾರಂಭಿಸಲು ಕಲ್ಪಿಸಿರುವ ಮೊತ್ತ ಕಡಿಮೆಯಾಗಿದ್ದು, ಅದನ್ನು ರೂ. 2.00 ಕೋಟಿಗಳಿಗೆ ಹೆಚ್ಚಿಸಬೇಕೆಂದು ಸದಸ್ಯರಾದ ಶ್ರೀ ಟಿ. ಹೆಚ್. ಶ್ರೀನಿವಾಸಯ್ಯ ಅಭಿಪ್ರಾಯ ವ್ಯಕ್ತಪಡಿಸಿದರು.

ಚರ್ಚೆಯ ಕೊನೆಯಲ್ಲಿ ಮಾನ್ಯ ಕುಲಪತಿಗಳು ವಿವರಣೆ ನೀಡಿ, ಪ್ರಸ್ತುತ ಆಯವ್ಯಯ ಅಂದಾಜು ಪತ್ರ ಶೈಕ್ಷಣಿಕ ಅಭಿವೃದ್ಧಿಗೆ ಪೂರಕವಾದ ಆಯವ್ಯಯವಾಗಿದ್ದು. ಸದಸ್ಯರು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಸಕಾರಾತ್ಮಕವಾಗಿ ಸ್ವೀಕರಿಸಲಾಗುವುದು. ಪ್ರಸ್ತುತ ಪರೀಕ್ಷಾ ವಿಭಾಗದ ಕಟ್ಟಡವನ್ನು ಸಹ ನವೀಕರಣಗೊಳಿಸಲು ಮತ್ತು ಹೊಸ ವಾಣಿಜ್ಯ ವಿಭಾಗದ ಕಟ್ಟಡದ ಮೇಲೆ ಇನ್ನು 2 ಅಂತಸ್ತುಗಳನ್ನು ನಿರ್ಮಿಸುವುದು ಹಾಗೂ ಪರೀಕ್ಷಾ ವಿಭಾಗದ ಕಟ್ಟಡ ದುರಸ್ಥಿ ಮುಂತಾದ ಕಾಮಗಾರಿಗಳಿಗಾಗಿ ಆಯವ್ಯಯದಲ್ಲಿ ಅವಕಾಶ ಕಲ್ಪಿಸಲಾಗಿದೆ. ಆರೋಗ್ಯ ಕೇಂದ್ರ, ಮಾನಸಿಕ ಆರೋಗ್ಯ ಸಮಾಲೋಚನೆ, ಆರೋಗ್ಯ ವಿಮೆ ಸಂಬಂಧಿಸಿದಂತೆ, ಕ್ರಮ ವಹಿಸಲಾಗುವುದು. ಉಪಹಾರ ಗೃಹಕ್ಕೆ ಸಂಬಂಧಿಸಿದಂತೆ ತಾತ್ಕಾಲಿಕ ವ್ಯವಸ್ಥೆ ಮಾಡಲಾಗುವುದು ಮತ್ತು ಆಧುನಿಕ ವಿನ್ಯಾಸದ ಕ್ಯಾಂಟೀನ್ ಕಟ್ಟಡ ನಿರ್ಮಿಸುವ ಕುರಿತು ಅಗತ್ಯ ಕ್ರಮ ವಹಿಸಲಾಗುವುದು ಎಂದು ತಿಳಿಸಿದರು. NAAC ಮಾನ್ಯತೆ ಕುರಿತಂತೆ ವಿದ್ಯಾರ್ಥಿ ಸ್ನೇಹಿ ಚಟುವಟಿಕೆಗಳು ಮತ್ತು ಸೌಕರ್ಯಗಳನ್ನು ನಿರ್ಮಿಸುವುದು ಅನಿವಾರ್ಯವಾಗಿದೆ. ಜೊತೆಗೆ IQAC, PMEB, Placement Cell ಇತ್ಯಾದಿಗಳನ್ನು ಕಾರ್ಯರೂಪಕ್ಕೆ ತರಬೇಕಾಗಿದೆ. ಸಂಶೋಧನೆಗೆ ಸಂಬಂಧಿಸಿದಂತೆ ಅಗತ್ಯ ಸಲಹೆ ಸೂಚನೆಗಳನ್ನು ನೀಡಲು ಸಂಶೋಧನಾ ಸಲಹಾ ಸಮಿತಿ ರಚಿಸಿ, ಸಂಶೋಧನೆಗೆ ಒತ್ತು ಕೊಡುವ ಕೆಲಸಕ್ಕೆ ಚಾಲನೆ ನೀಡಲಾಗುವುದು. ಸದಸ್ಯರ ಭಾವನೆ ಹಾಗೂ ಸಲಹೆಗಳನ್ನು ಪರಿಗಣಿಸಿ ಆಯವ್ಯಯದಲ್ಲಿ ಅವಕಾಶ ಕಲ್ಪಿಸಲು ಕ್ರಮಕೈಗೊಳ್ಳುವುದಾಗಿ ತಿಳಿಸಿ 2022–23ನೇ ಸಾಲಿನ ಆಯವ್ಯಯ ಪತ್ರಕ್ಕೆ ಅನುಮೋದನೆ ನೀಡಲು ಕೋರಿದರು.

ಸಿಂಡಿಕೇಟ್ ತೀರ್ಮಾನ:

ವಿಶ್ವವಿದ್ಯಾನಿಲಯದ 2022-23ನೇ ಸಾಲಿನ ವಾರ್ಷಿಕ ಆಯವ್ಯಯ ಪತ್ರಕ್ಕೆ ಸಭೆ ಸರ್ವಾನುಮತದ ಅನುಮೋದನೆ ನೀಡಿತು.

ವಿಷಯ ಸಂಖ್ಯೆ: 6

Sub : Consideration of the Report of Enquiry Committee regarding 43rd All India Social Science Congress held at BCU.

Ref :
1. Proceedings of the Special Syndicate meeting held on 27.08.2020.
2. Notification No.ಬೆಂ.ನ.ವಿ/43ನೇ ಸ.ವಿ.ಕಾ/2020-21 dated 06.10.2020.
3. Enquiry Report dated 25.10.2021 submitted by the Chairman of Enquiry Committee.
4. Resolution of the Syndicate dated 17.12.2021.

***REFERENCE NOTE:***

The Special Syndicate meeting held on 27.08.2020 has resolved to constitute an Enquiry Committee consisting of 4 Members under the Chairmanship of a retired IAS Officer. Accordingly, the Enquiry Committee was constituted under the Notification cited at reference (2) above, appointing Sri.B.R. Jayaramaraje Urs, IAS (Retd) as Chairman of the Committee. The brief recommendations on the issues considered by the Committee are as under:

Issue(1): Activities conducted by All India Social Science Congress from the inception.

The Committee after recording the chronological events has concluded that the activities of the 43rd All India Social Science Congress began in May 2018 and declared closed on January 21, 2020.

Issue (2): Financial issues Vis-à-vis conduct of 43rd All India Social Science Congress.

The Committee after detailed verification of financial transactions, documents, statement and providing opportunity to the Colleges to submit their opinion/statement, has concluded that the financial issues were held transparently and not in any opaque manner by the Organizing Committee.

Issue (3) : The procedures followed in conducting the Social Science Congress

The Committee finds that the Organizing Committee has not spent any amount directly towards organizing AISSC, as such expenditure is incurred by various BCU affiliated colleges at

the request of the Vice-Chancellor. Virtually, the entire event is found to have been organized by the BCU affiliated colleges and hence we find that there arose no occasion to the Organizing Committee to follow the KTTP Act. Hence, this Committee concludes that the Organizing Committee has not collected any cash nor deposited the cheques and demand drafts in the relevant Bank and hence this did not warrant the Organizing Committee to follow any procedure under the KTPP Act.

The Committee has made the following recommendations:

1) The present Vice-Chancellor shall convene a meeting of the Former Vice-Chancellor, Registrar (Administration), Members of the Organizing Committee, Representatives of UGC and other bodies to sort out the outstanding issues.
2) The Organizing Committee shall meet within one month and see that Audited statement, utilization certificate and proceedings of the Congress are sent to UGC for sanction of grant.
3) In view of the fact, the BCU has resolved not to contribute anything to ISSC, the present Vice-Chancellor in consultation with former Vice-Chancellor reiterate to ISSC the amount payable to BCU by the ISSA and request to use this amount for payment of TA & DA and the balance TA/DA to be payable be met out of ISSC funds and close the correspondence. Kumara Krupa Guest House charges may be paid out of the money available in ISSC account excluding the amount payable to BCU.
4) Further, future events, if any, have to be organized directly by the University, (BCU not to seek any financial assistance from the colleges). In the instant case, the Syndicate has to take the blame as it permitted the event to be organized by the Organizing Committee without University making any financial commitment and just allowed the Organizing Committee to fend for itself. Probably this has forced the Organizing Committee and the Vice-Chancellor to approach the colleges for financial assistance.
5) The Vice-Chancellors should not launch such mega events expecting money from AISSC or any other bodies without written assurances from them. In the present case, the Vice-Chancellor launched the event without getting any written confirmation from the Apex Educational bodies regarding sanction of grants. The Vice-Chancellor appears to have taken the words of representatives of such Apex bodies at face value and ventured organizing the event. Finally the Vice-Chancellor had to fend for himself as the money assured never came. The Vice-Chancellor has to take the blame for not identifying the blind spots before resorting to such events.
6) The Vice-Chancellor should not resort to such events without committing the Syndicate or BCU to fund such events in future.
7) There appears to be some kind of trust deficit existed between the Vice-Chancellor and the Syndicate, which manifested throughout the event which is unfortunate and became a real eyesore, which could have been avoided by all the concerned in the interest of fair name of BCU which has taken birth recently and trying to learn a new step.

8) KTPP Act has to be strictly followed in case BCU organize any events in future.

9) The Vice-Chancellor before venturing into any event has to take the Syndicate into confidence.

10) Financial and administrative matters relating to the events have to be handled only by the Registrar (Administration) and the Finance Officer, who work directly under the supervision and guidance of the Vice-Chancellor.

The extract of the report was placed before the Syndicate in its meeting held on 17.12.2021. The Syndicate has resolved to resubmit the subject along with the Report of the Enquiry Committee.

Accordingly, the Report of the Enquiry Committee and its findings are placed before the Syndicate for consideration.

*ವಿವರಣೆ:*

43 ನೇ ಅಖಿಲ ಭಾರತ ಸಮಾಜ ವಿಜ್ಞಾನ ಕಾಂಗ್ರೆಸ್ ಆಯೋಜನೆಗೆ ಸಂಬಂಧಿಸಿದಂತೆ ಶ್ರೀ ಬಿ.ಆರ್ ಜಯರಾಮರಾಜ್ ಅರಸು ನಿವೃತ್ತ ಐ.ಎ.ಎಸ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಲಾದ ವಿಚಾರಣಾ ಸಮಿತಿ ಸಲ್ಲಿಸಿದ ವರದಿಯನ್ನು ಸಭೆಯಲ್ಲಿ ಮಂಡಿಸಲಾಯಿತು.

ಸದಸ್ಯರಾದ ಡಾ. ಆರ್. ಕೆ. ಚಂದ್ರನಾಥ್ ರವರು ವರದಿಯ ಮುಖ್ಯಾಂಶಗಳನ್ನು ಪ್ರಸ್ತಾಪಿಸಿ, 43 ನೇ ಅಖಿಲ ಭಾರತ ಸಮಾಜ ವಿಜ್ಞಾನ ಕಾಂಗ್ರೆಸ್ ಆಯೋಜನೆಗೆ ಸಂಬಂಧಿಸಿದ ಚಟುವಟಿಕೆಗಳು ಪಾರದರ್ಶಕವಾಗಿ ನಡೆದಿರುವುದನ್ನು ವಿಚಾರಣೆಯಲ್ಲಿ ಧೃಡಪಡಿಸಲಾಗಿದೆ. ಕಾರಣ ವರದಿ ಒಪ್ಪಿಕೊಳ್ಳಬಹುದೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

ವರದಿಯಲ್ಲಿನ ಕೆಲವು ಆಕ್ಷೇಪಾರ್ಹ ಅಂಶಗಳ ಹಾಗೂ ಶಿಫಾರಸ್ಸುಗಳ ಕುರಿತು ಅಸಮಾಧಾನ ವ್ಯಕ್ತಪಡಿಸಿದ ಮಾನ್ಯ ಸದಸ್ಯರಾದ ಶ್ರೀ ಹೆಚ್. ಎನ್. ಹರಿಪ್ರಸಾದ ಮತ್ತು ಶ್ರೀ ಟಿ. ಹೆಚ್. ಶ್ರೀನಿವಾಸಯ್ಯ ರವರು ವರದಿಯ ಸಾಮಾನ್ಯ ಶಿಫಾರಸ್ಸುಗಳನ್ನು ಹೊರತುಪಡಿಸಿ ಉಳಿದಂತೆ ವರದಿಯನ್ನು ಒಪ್ಪಿಕೊಳ್ಳುವುದು ಸೂಕ್ತವೆಂದು ಅಭಿಪ್ರಾಯಪಟ್ಟರು.

ಕುಲಪತಿಗಳು ಈ ಕುರಿತು ಮಾತನಾಡಿ, ಹೊಸ ವಿಶ್ವವಿದ್ಯಾನಿಲಯ ಪ್ರಾರಂಭದ ಹಂತದಲ್ಲಿ ಇಂತಹ ರಾಷ್ಟ್ರೀಯ ಸಮವೇಶ ಜರುಗಿಸುವ ತೀರ್ಮಾನ ಕೈಗೊಂಡಿರುವುದು ಸಮಂಜಸವಲ್ಲ. ತಾವು ಗಮನಿಸಿದಂತೆ ಹಿಂದಿನ ಕುಲಪತಿಗಳು ತಮ್ಮ ಹೇಳಿಕೆಯಲ್ಲಿ. ಈ ಸಮ್ಮೇಳವನ್ನು ಆಯೋಜನೆಯಿಂದ ಹೊಸದಾಗಿ ಸ್ಥಾಪಿತವಾದ ಈ ವಿಶ್ವವಿದ್ಯಾನಿಲಯವನ್ನು ದೇಶದ ಇತರ ಭಾಗಗಳಿಗೆ ಪರಿಚಯಿಸಲು ಸಾಧ್ಯವಾಗುತ್ತದೆ ಎಂಬ ಆಶಯ ಹಾಗೂ

ಸಂಯೋಜಿತ ಕಾಲೇಜುಗಳನ್ನು ವಿಶ್ವವಿದ್ಯಾನಿಲಯದೊಂದಿಗೆ ಒಳಗೂಡಿಸಿ ಕಾರ್ಯಕ್ರಮ ಆಯೋಜಿಸಿದ್ದು ಶ್ಲಾಘನೀಯ. ಸಂಯೋಜಿತ ಕಾಲೇಜುಗಳನ್ನು ಮತ್ತು ವಿಶ್ವವಿದ್ಯಾಲಯಗಳನ್ನು ಒಟ್ಟುಗೂಡಿಸಿ ಇಂತಹ ಕಾರ್ಯಕ್ರಮಗಳನ್ನು ಆಯೋಜಿಸಬೇಕಾಗುತ್ತದೆ. ಸಮ್ಮೇಳನ ಆಯೋಜಿಸಲು ಸಹಕರಿಸಿದ ಕಾಲೇಜುಗಳ ಆಡಳಿತ ಮಂಡಳಿಗಳನ್ನು ವಿಚಾರಣೆಗೆ ಒಳಪಡಿಸಿರುವುದು ಪರಸ್ಪರ ವಿಶ್ವಾಸದ ಕೊರತೆ ಉಂಟಾಗಲು ಆಸ್ಪದ ನೀಡುತ್ತದೆ ಎಂದು ತಿಳಿಸಿದರು.

ನಿಯಾಮನುಸಾರ ಸಿಂಡಿಕೇಟ್ ಉಪಸಮಿತಿ ರಚಿಸಲು ಅವಕಾಶವಿದೆ. ಆದರೆ ಈ ರೀತಿಯ ವಿಚಾರಣಾ ಸಮಿತಿ ರಚಿಸಿರುವುದು ಸಹ ಸಮಂಜಸವಲ್ಲವೆಂದು ಅಭಿಪ್ರಾಯ ಪಟ್ಟು ಸಂಪನ್ಮೂಲ ವ್ಯಕ್ತಿಗಳ ಪ್ರಯಾಣ ಭತ್ಯೆ ಬಿಲ್ಲು, ವಸತಿ ಗೃಹ, ವಾಹನ ಬಾಡಿಗೆ ಇತ್ಯಾದಿ ಬಿಲ್ಲುಗಳು ಪಾವತಿಯಾಗದೆ 2 ವರ್ಷಗಳಿಂದ ಬಾಕಿ ಇವೆ, ಇದರಿಂದ ವಿಶ್ವವಿದ್ಯಾಲಯದ ಘನತೆ ಕುಗ್ಗುತ್ತದೆ ಎಂದು ಕುಲಸಚಿವರು ಹೇಳಿದರು.

**<u>ಸಿಂಡಿಕೇಟ್ ತೀರ್ಮಾನ:</u>**

**43ನೇ ಅಖಿಲ ಭಾರತ ಸಮಾಜ ವಿಜ್ಞಾನಗಳ ಕಾಂಗ್ರೆಸ್ ಆಯೋಜನೆ ಸಂಬಂಧಿಸಿದಂತೆ, ಶ್ರೀ ಬಿ.ಆರ್ ಜಯರಾಮರಾಜ್ ಅರಸು ರವರು ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿಯ ವರದಿಯಲ್ಲಿನ ಸಾಮಾನ್ಯ ಶಿಫಾರಸ್ಸುಗಳನ್ನು ಹೊರತುಪಡಿಸಿ ಉಳಿದಂತೆ ವರದಿಯನ್ನು ಒಪ್ಪಿಕೊಳ್ಳಲಾಯಿತು.**

**43ನೇ ಅಖಿಲ ಭಾರತ ಸಮಾಜ ವಿಜ್ಞಾನಗಳ ಕಾಂಗ್ರೆಸ್ ಆಯೋಜನೆ ಸಂಬಂಧಿಸಿದ ಪ್ರಯಾಣ ಭತ್ಯೆ, ದಿನ ಭತ್ಯೆ, ಕುಮಾರ ಕೃಪ ಅತಿಥಿ ಗೃಹದ ಬಿಲ್ಲು ಒಳಗೊಂಡಂತೆ ಬಾಕಿ ಇರುವ ಎಲ್ಲಾ ಬಿಲ್ಲುಗಳನ್ನು, 43ನೇ ಅಖಿಲ ಭಾರತೀಯ ಸಮಾಜ ವಿಜ್ಞಾನ ಕಾಂಗ್ರೆಸ್ ಆಯೋಜನೆಗಾಗಿ ಪ್ರಾರಂಬಿಸಲಾದ ಬ್ಯಾಂಕ್ ಖಾತೆಯಲ್ಲಿರುವ ಮೊತ್ತ / ವಿಶ್ವವಿದ್ಯಾನಿಲಯದ ನಿಧಿಯಿಂದ ಸಂದಾಯ ಮಾಡಲು ಅನುಮೋದನೆ ನೀಡಲಾಯಿತು.**

ಕುಲಸಚಿವರು (ಮೌಲ್ಯಮಾಪನ) ರಿಂದ ವಂದನಾರ್ಪಣೆ ಹಾಗೂ ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯವಾಯಿತು.

| | |
|---|---|
| ಸಹಿ/- | ಸಹಿ/- |
| ಕುಲಸಚಿವರು ಹಾಗೂ | ಕುಲಪತಿಗಳು |
| ಸದಸ್ಯ ಕಾರ್ಯದರ್ಶಿಗಳು | ಸಭಾಧ್ಯಕ್ಷರು |

ಕುಲಸಚಿವರು
ಬೆಂಗಳೂರು ನಗರ ವಿಶ್ವವಿದ್ಯಾನಿಲಯ